# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೇಂಟ್/ಉಪಲೋಕ್ ಬಿಜಿಎಂ/2884/2012/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 20/08/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಕೆ.ಐ. ಭಾವಖಾನ, ಹಿಂದಿನ ಪಿ.ಡಿ.ಒ., ನಾಗಠಾಣ ಗ್ರಾಮ ಪಂಚಾಯತ್, ನಾಗಠಾಣ, ವಿಜಯಪುರ ತಾಲೂಕ್, ವಿಜಯಪುರ ಜಿಲ್ಲೆ ಮತ್ತು (2) ಶ್ರೀ ಚಂದ್ರಶೇಖರ ಬಸಪ್ಪ ಅರಿಕೇರಿ, ಅಧ್ಯಕ್ಷರು, ನಾಗಠಾಣ ಗ್ರಾಮ ಪಂಚಾಯತ್, ನಾಗಠಾಣ, ವಿಜಯಪುರ ತಾಲೂಕ್, ವಿಜಯಪುರ ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ವರದಿ.

---

1. ಶ್ರೀ ಎಸ್ ಶಿವಯೋಗಪ್ಪ ತಂದೆ ಸಿದ್ದಪ್ಪ ಸಮಗೊಂಡ ವಾಸ : ನಾಗಠಾಣ, ವಿಜಯಪುರ ತಾಲೂಕ್ ಮತ್ತು ಜಿಲ್ಲೆ (ಇನ್ನು ಮುಂದೆ ಇವರನ್ನು 'ದೂರುದಾರರು' ಎಂದು ಅನುಕೂಲಕ್ಕಾಗಿ ಸಂಭೋದಿಸಲಾಗುವುದು) ಇವರು ನಾಗಠಾಣ ಪಂಚಾಯತ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಎನ್.ಆರ್.ಇ.ಜಿ ಯೋಜನೆಯಡಿಯಲ್ಲಿ ಸುಮಾರು ರೂ 1 ಕೋಟಿ ಖರ್ಚು ಮಾಡಿದ್ದು, ನಾಗಠಾಣ, ಹುಣಶ್ಯಾಳ, ಕುಂದೊಡ್ಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸದೆ ಹಣವನ್ನು ನುಂಗಿ ಹಾಗಿದ್ದಾರೆ. ಸದರಿ ಗ್ರಾಮಗಳಿಗೆ ಆಶ್ರಯ ಹಾಗೂ ಗುಡಿಸಲು ಯೋಜನೆಯಡಿಯಲ್ಲಿ ಸರ್ಕಾರದಿಂದ ಬಂದ ಹಣವನ್ನು ಹಾಗೂ ಹೊಲಿಗೆ ಯಂತ್ರ ಮತ್ತು ಪಂಪ್‌ಸೆಟ್‌ಗಳ ವಿತರಣೆಯಲ್ಲೂ ಸಹ ಹಣ ದುರುಪಯೋಗವಾಗಿರುತ್ತದೆಂದು, ದೂರನ್ನು ಸಲ್ಲಿಸಿದ ಮೇರೆಗೆ ಗೌರವಾನ್ವಿತ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದೂರಿನ ತನಿಖೆಗೆ ಆದೇಶಿಸಿದಂತೆ ಪ್ರಕರಣದ ತನಿಖೆಯನ್ನು ಕೈಗೊಳ್ಳಲಾಗಿದೆ.

2. ದೂರಿನ ಆಧಾರದ ಮೇಲೆ ಎದುರುದಾರರಾದ 1) ಶ್ರೀ ಚಂದ್ರಶೇಖರ್ ಬಸಪ್ಪ ಅರಕೇರಿ, ಅಧ್ಯಕ್ಷರು, ನಾಗಠಾಣ ಗ್ರಾಮ ಪಂಚಾಯತ್, ನಾಗಠಾಣ, ವಿಜಯಪುರ ತಾಲೂಕ್, ವಿಜಯಪುರ ಜಿಲ್ಲೆ 2) ಕಾರ್ಯದರ್ಶಿ, ನಾಗಠಾಣ ಗ್ರಾಮ ಪಂಚಾಯತ್, ನಾಗಠಾಣ, ವಿಜಯಪುರ ತಾಲೂಕ್, ವಿಜಯಪುರ ಜಿಲ್ಲೆ ಮತ್ತು 3) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಾಗಠಾಣ ಗ್ರಾಮ ಪಂಚಾಯತ್, ನಾಗಠಾಣ, ವಿಜಯಪುರ ತಾಲೂಕ್, ವಿಜಯಪುರ ಜಿಲ್ಲೆ ಇವರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1 ಮತ್ತು 3ನೇ

ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

3. ಏತನ್ಮಧ್ಯೆ ಸದರಿ ದೂರಿನ ಆಧಾರದ ಮೇಲೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ವಿಜಯಪುರದ ಲೋಕಾಯುಕ್ತ ಸಂಸ್ಥೆಯ ಆರಕ್ಷಕ ನಿರೀಕ್ಷಕರಿಗೆ ತಿಳಿಸಲಾಗಿದ್ದು, ಅದರಂತೆ ದಿನಾಂಕ 23.3.2014 ರಂದು ವರದಿಯನ್ನು ಸಲ್ಲಿಸಿರುತ್ತಾರೆ. 1 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಶ್ರೀ ಅಣ್ಣಾರಾಯ ಗುಣಕಿ ಮತ್ತು ಈ ಪ್ರಕರಣದ ದೂರುದಾರರು ಕೂಡಿಕೊಂಡು ಜಿಲ್ಲಾ ಪಂಚಾಯತ್, ವಿಜಾಪುರ ಇಲ್ಲಿಯ ಒಂಬೂಡ್ಸ್‌ಮೆನ್ ರವರಿಗೆ ದೂರು ದಾಖಲಿಸಿದ ಕಾರಣ ಒಂಬೂಡ್ಸ್‌ಮೆನ್ ಅವರು ಈ ವಿಚಾರದಲ್ಲಿ ವಿವರವಾದ ವಿಚಾರಣೆಯನ್ನು ಮಾಡಿ, ಆದೇಶವನ್ನು ಹೊರಡಿಸಿರುತ್ತಾರೆ. 2010–11ನೆ ಕಾಮಾಗಾರಿಗಳ ಅನುಷ್ಠಾನದಲ್ಲಿ ಲೋಪ ಉಂಟಾಗಿದ್ದಕ್ಕಾಗಿ ರೂ.39,105/– ಅನ್ನು ತಮ್ಮ ಕಡೆಯಿಂದ ವಸೂಲಾತಿಗಾಗಿ ಆದೇಶಿಸಿದ್ದು, ಅದರಂತೆ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲಾದಿಗೆ, ಉಳಿದಂತೆ ಯಾವುದೇ ಅವ್ಯವಹಾರ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಮಾನ್ಯ ಒಂಬೂಡ್ಸ್‌ಮೆನ್ ಅವರು ಸಹ ತಮ್ಮ ಆದೇಶದಲ್ಲಿ ಯಾವುದೇ ಅವ್ಯವಹಾರ ಆಗಿರುವುದಿಲ್ಲವೆಂಬ ಬಗ್ಗೆ ಚರ್ಚಿಸಿರುತ್ತಾರೆ. ಇಂದಿರಾ ಆವಾಸ್ ಯೋಜನೆ, ಆಶ್ರಯ ಯೋಜನೆ, . ಡಾ.ಅಂಬೇಡ್ಕರ್ ಯೋಜನೆಗಳಡಿಯಲ್ಲಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅನುಷ್ಠಾನಗೊಂಡ ಮನೆಗಳನ್ನು ಭೌತಿಕವಾಗಿ ಪರಿಶೀಲಿಸಿ ಫೋಟೋ ಸಮೇತ ಬಿಲ್ಲುಗಳನ್ನು ತಯಾರಿಸಿ ಫಲಾನುಭವಿಗಳ ಹೆಸರಿಗೆ ಕ್ರಾಸ್ ಚೆಕ್ ನೀಡಲಾಗಿರುತ್ತದೆ, ಆದ್ದರಿಂದ, ಯಾವುದೇ ಅವ್ಯವಹಾರ ಎಸಗಿರುವ ಬಗ್ಗೆ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು, ನಿರ್ಮಲ ಭಾರತ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅನುಷ್ಠಾನಗೊಂಡ ಶೌಚಾಲಯಗಳನ್ನು ಭೌತಿಕವಾಗಿ ಪರಿಶೀಲಿಸಿ, ಫೋಟೋ ಸಮೇತ ಬಿಲ್ಲುಗಳನ್ನು ತಯಾರಿಸಿ ಫಲಾನುಭವಿಗಳ ಹೆಸರಿಗೆ ಕ್ರಾಸ್ ಚೆಕ್ ನೀಡಲಾಗಿರುತ್ತದೆ . ಆದ್ದರಿಂದ ಈ ಯೋಜನೆಯಡಿಯಲ್ಲೂ ಸಹ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ತಿಳಿಸಿರುತ್ತಾರೆ.

4. ವಿಜಯಪುರದಲ್ಲಿನ ಲೋಕಾಯುಕ್ತ ಸಂಸ್ಥೆಯ ಆರಕ್ಷಕ ಉಪ ನಿರೀಕ್ಷಕರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ್ದಲ್ಲಿ, ನಾಗಠಾಣ ಪಂಚಾಯತಿ ವತಿಯಿಂದ ನಾಗಠಾಣ, ಹುಣಶ್ಯಾಲ ಮತ್ತು ಕುರಿದೊಡ್ಡಿ ಗ್ರಾಮದಲ್ಲಿ ಸನ್ 2010–11 ನೇ ಸಾಲಿನಲ್ಲಿ 23 ಮತ್ತು 2010–12 ರಲ್ಲಿ 10 ಒಟ್ಟು 33 ಶೌಚಾಲಯಗಳಿಗಾಗಿ ಫಲಾನುಭವಿಗಳಿಗೆ ತಲಾ ರೂ.3000/– ಪ್ರೋತ್ಸಾಹ ಧನ ನೀಡಲಾಗಿರುತ್ತದೆ. ಈ 33 ಫಲಾನುಭವಿಗಳಲ್ಲಿ (1) ಶ್ರೀ ರಾಮಣ್ಣ ಮಲಕಣ್ಣ ಹುಣಶ್ಯಾಲ, (2) ಶ್ರಿ ಚೆನ್ನಪ್ಪ ವಿ. ಹಂಡಿ 3) ಶ್ರೀ ಉದೇಶಯ್ಯ ಸಂಗಯ್ಯ

ಬುರಕಾಟ (4) ಶ್ರೀ ಶಾಂತಪ್ಪ ಸಿದಪ್ಪ ಕತ್ತಳ್ಳಿ, (5) ಶ್ರೀ ಶಂಕ್ರೆಪ್ಪ ಬಸಪ್ಪ ಹಂಡಿ, (6) ಶ್ರೀಮತಿ ಇಂದ್ರಾಬಾಯಿ ಮಲ್ಲಪ್ಪ ಪೂಜಾರ್ಯಾಕ, (7) ಶ್ರೀ ರಾಜಕುಮಾರ ಬಸಪ್ಪ ಬಂಡಿ, (8) ಶ್ರೀಮತಿ ಹಸಿನಾಬಿ ಮೊಹಮ್ಮದ್ ರಫೀಕ್ ಮುಲ್ಲಾ, (9) ಶ್ರೀ ಸಿದ್ದಲಿಂಗ ಮಲ್ಲೇಶಪ್ಪ ವಗದುರ್ಗಿ, (10) ಶ್ರೀ ಮಲ್ಲಪ್ಪ ಚನಪ್ಪ ಮಸಳಿ, ಮತ್ತು 11) ಶ್ರೀ ಸೋಮು ವಿಠ್ಠಪ್ಪ ಕತ್ನಳ್ಳಿ ರವರುಗಳಿಗೆ ಪಂಚಾಯತಿ ವತಿಯಿಂದ, ಶೌಚಾಲಯ ನಿರ್ಮಾಣಕ್ಕಾಗಿ ಪ್ರೋತ್ಸಾಹದ ರೂ.3000/- ಗಳನ್ನು ನೀಡಲಾಗಿದೆ. ಸದರಿಯವರುಗಳು ಶೌಚಾಲಯ ನಿರ್ಮಾಣ ಮಾಡಿಲ್ಲವೆಂದು ತನಿಖಾಧಿಕಾರಿಯವರು ವರದಿ ಮಾಡಿರುತ್ತಾರೆ. ಅದಲ್ಲದೆ ನಾಗಠಾಣ ಪಂಚಾಯತಿ ವ್ಯಾಪ್ತಿಯಲ್ಲಿರುವ ನಾಗಠಾಣ, ಹುಣಶ್ಯಾಳ ಹಾಗೂ ಕುಂದೊಡ್ಡಿ ಗ್ರಾಮಗಳಿಗೆ 2010-11 ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಒಟ್ಟು 76 ಫಲಾನುಭವಿಗಳನ್ನು ಆಯ್ಕೆ ಮಾಡಿ ತಲಾ ರೂ.50,000/- ಗಳಂತೆ ಸಹಾಯ ಧನವನ್ನು ನೀಡಲಾಗಿರುತ್ತದೆ. ಸದರಿ ಫಲಾನುಭವಿಗಳ ಮನೆಗೆ ಖುದ್ದಾಗಿ ಬೇಟಿ ನೀಡಿ ಪರಿಶೀಲಿಸಿದ್ದು, ಆ ಫಲಾನುಭವಿಗಳಲ್ಲಿ (1) ಶ್ರೀಮತಿ ಶೈಲಾ ವೀರಗೊಂಡ ತೇಲಿ, 2) ಶ್ರೀಮತಿ ಲಕ್ಷ್ಮೀಬಾಯಿ ಶುಭಾಷ ಪತ್ತಾರ, 3) ಶ್ರೀಮತಿ ದಾನಮ್ಮ ಮೋನಪ್ಪ ಬಡಿಗೇರ 4) ಶ್ರೀಮತಿ ಯೋರವ್ವ ಕಲ್ಲಪ್ಪ ಮಸಳಿ 5) ಶ್ರೀಮತಿ ಸತ್ಯವ್ವ ಮಾದೇವ ಮೇಟಗಾರ, 6) ಶ್ರೀಮತಿ ಸತ್ಯವ್ವ ಅಮೋಘಸಿದ್ಧ ಪೂಜೇರಿ 7) ಶ್ರೀಮತಿ ಶಾರದಾ ಶ್ರೀಶೈಲ ಗಿರಿಸಾಗರ ಮತ್ತು 8) ಶ್ರೀಮತಿ ಲಕ್ಷ್ಮಿ ಪ್ರಕಾಶ ಜಿಜ್ಜರಗಿ, ಇವರುಗಳಿಗೆ ಪಂಚಾಯಿತಿ ವತಿಯಿಂದ ರೂ.50,000/-ದಂತೆ ಹಣವನ್ನು ನೀಡಲಾಗಿದ್ದು, ಇವರುಗಳು ಮನೆಯನ್ನು ನಿರ್ಮಾಣ ಮಾಡಿರುವುದಿಲ್ಲ. ಕೆಲವರು ಅರ್ಧದಷ್ಟು ಮನೆಯನ್ನು ಕಟ್ಟಿ ಬಿಟ್ಟಿರುತ್ತಾರೆ. ಇದಲ್ಲದೆ, ಕೆಲವು ಫಲಾನುಭವಿಗಳು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೂ ಸಹ ಈ ಯೋಜನೆಯ ಪ್ರೋತ್ಸಾಹ ಧನವನ್ನು ಪಡೆದಿರುವ ಬಗ್ಗೆ ತನಿಖಾಧಿಕಾರಿಯವರ ವಿಚಾರಣೆಯಿಂದ ತಿಳಿದು ಬಂದಿರುತ್ತದೆ.

5. 2010-11 ಮತ್ತು 2011-12 ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಹಾಜರುಪಡಿಸಲಾಗಿರುತ್ತದೆ. ಆದರೆ, ಸದರಿ ಯೋಜನೆಯಡಿಯಲ್ಲಿ ಸರ್ಕಾರದ ವತಿಯಿಂದ ಹಣ ಮಂಜೂರಾಗಿರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಹಾಗೂ ಸದರಿ ಫಲಾನುಭವಿಗಳ ಪಟ್ಟಿಯು ಯಾವ ವರ್ಷದ ಯೋಜನೆಗೆ ಸಂಬಂಧಿಸಿದ ಪಟ್ಟಿಯೆಂಬುದು ತಿಳಿದು ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

6. ನಾಗಠಾಣ ಪಂಚಾಯತಿ ವತಿಯಿಂದ 2010-11 ಮತ್ತು 2011-12ನೇ ಸಾಲಿನಲ್ಲಿ ಬಡವರಿಗಾಗಿ ಹೊಲಿಗೆ ಯಂತ್ರವನ್ನು ಖರೀದಿಸಿರುವುದಿಲ್ಲ. ಆದರೆ, ಸದರಿ ಅವಧಿಯನ್ನು ಪಂಪ್‌ಸೆಟ್‌ಗಳನ್ನು ವಿತರಿಸಿದ್ದು, ಈ ಬಗ್ಗೆ, ತನಿಖಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ಫಲಾನುಭವಿಗಳಾದ 1) ಶ್ರೀ ಭೂತಾಳಿ ಮಲ್ಲಪ್ಪ ಹಾದಿಮನಿ 2) ಶ್ರೀ ಕಾಮಣ್ಣ ಸತ್ಯಪ್ಪ ತಗಡೆ 3) ಲಕ್ಕಪ್ಪ ಬಸಲಿಂಗಪ್ಪ ಹೊಲೇರ, 4) ಶ್ರೀ ಪರಸಪ್ಪ ರಾಮಪ್ಪ

N. Anandu

ಹನುಮಂತ ಗಾಣ್ಣ 5) ಶ್ರೀ ಶಿವಪ್ಪ ರಾಮಪ್ಪ ಹರಿಜನ ಇವರೆಲ್ಲರೂ ನಾಗಠಾಣ ಗ್ರಾಮದವರಾಗಿದ್ದು, ತಮ್ಮ ಹೊಲ ಗದ್ದೆಗಳಲ್ಲಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡಿರುತ್ತಾರೆ. ಸದರಿ ಪಂಪ್‌ಸೆಟ್‌ಗಳಿಗೆ ಒದಗಿಸಲು ಸರ್ಕಾರದಿಂದ ಮಂಜೂರಾಗಿರುವ ಒಟ್ಟು ರೂ.1.47.550/- ರಲ್ಲಿ ರೂ.75.830/- ಖರ್ಚು ಮಾಡಲಾಗಿದ್ದು. ಉಳಿದ ರೂ.71.720/- ಅನ್ನು ಬಾಕಿ ಉಳಿದಿರುವುದಾಗಿ. ಪಂಚಾಯತಿ ವತಿಯಿಂದ ಪಾವತಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೇಯೇ 'ನರೇಗಾ' ಯೋಜನೆಯಡಿಯಲ್ಲಿ, ಒಟ್ಟು ರೂ.71.20.297/- ಮೊತ್ತದ ಹಣವನ್ನು ಮಂಜೂರು ಮಾಡಲಾಗಿದ್ದು, ಅದರಲ್ಲಿ ರೂ.70,89,621/- ಅನ್ನು ಖರ್ಚು ಮಾಡಲಾಗಿರುತ್ತದೆ. ದಿ.31.3.2012ಕ್ಕೆ ಅಂತಿಮ ಶಿಲ್ಕು ರೂ. 30.676/- ಇರುತ್ತದೆ. ದಿ.31.3.2011ಕ್ಕೆ ರೂ.17.87.961/- ಮೊತ್ತದ ಹಣವು 13ನೇ ಹಣಕಾಸಿನ ಸಾಲಿನಲ್ಲಿ 2010-11ನೇ ವರ್ಷದಲ್ಲಿ ದಿ.1.4.2010 ರಂದು ಪಂಚಾಯತಿಯ ಹೆಸರಿನಲ್ಲಿ ರೂ.3.34.863/- ಮೊತ್ತವು ಬಾಕಿಯಿದ್ದು, ಅದರಲ್ಲಿ ರೂ.1,09,487/- ಅನ್ನು ನೀರು ನಿರ್ವಹಣೆಗೆ. ಕೈ ಪಂಪ್ ದುರಸ್ತಿಗೆ ಸಬ್‌ಮರ್ಸಿಬಲ್ ಪಂಪ್ ದುರಸ್ತಿಗೆ, ಹಾಗೂ ಪೈಪ್‌ಲೈನ್ ದುರಸ್ತಿಗೆ ಮತ್ತು ಕೂಲಿ ಕಾರ್ಮಿಕರ ವೇತನಕ್ಕಾಗಿ ಖರ್ಚು ಮಾಡಿದ್ದು, ರೂ.2.25,376/- ಅನ್ನು ಬಾಕಿ ಉಳಿದಿರುತ್ತದೆಂದು ತಿಳಿಸಿರುತ್ತರೆ. 2011-12ನೆ ಸಾಲಿನಲ್ಲಿ 13ನೇ ಹಣಕಾಸಿನ ಒಟ್ಟು ರೂ.4,78,934/- ಮೊತ್ತದ ಹಣವು ಉಳಿದಿದ್ದು, ಅದರಲ್ಲಿ ರೂ.2,00.000/- ದ ಮೊತ್ತದ ಹಣವನ್ನು ನಾಗಠಾಣ ಕೇರಿ ಬಾವಿಯಿಂದ ಹೊನ್ನುಟಗಿ ಬಸ್ತಿವರೆಗೆ ಪೈಪ್‌ಲೈನ್ ಜೋಡಣೆಗಾಗಿ ಖರ್ಚು ಮಾಡಲಾಗಿದೆ ಎಂದು ಹಾಗೂ ರೂ.2.74.632/ ಅನ್ನು ಕೈಪಂಪ್ ರಿಪೇರಿಗೆ ಹಾಗೂ ಸಬ್ ಮರ್ಸಿಬಲ್ ಮೋಟಾರು ರಿಪೇರಿ ಖರ್ಚು ಮಾಡಿರುವುದಾಗಿ ತೋರಿಸಿರುತ್ತಾರೆ, ಇನ್ನೂ ರೂ. 4,305/- ಉಳಿಕೆ ಹಣ ಇರುತ್ತದೆ ಎಂದು ತಿಳಿಸಿರುತ್ತಾರೆ. ನಾಗಠಾಣ ಗ್ರಾಮ ಪಂಚಾಯತಿಗೆ ಈ ಹಿಂದೆ ರೂ.1.80,00/- ಮೊತ್ತದ ಹಣವನ್ನು ಅನುಧಾನವಾಗಿ ಮಂಜೂರಾಗಿದ್ದು. ಸದರಿ ಮೊತ್ತವನ್ನು ನಾಗಠಾಣ ಕೆರೆ ಬಾವಿಯಿಂದ ಹೊನ್ನುಟಗಿ ಬಸ್ತಿವರೆಗೆ ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯುವರು ಶ್ರೀ ಎಸ್.ಎಂ. ವಾಲಿ, ಸಹಾಯಕ ಅಭಿಯಂತರರು ಲೋಕೋಪಯೋಗಿ ಇಲಾಖೆ ವಿಜಯಪುರ ಇವರೊಡನೆ, 2010-11ನೇ ಸಾಲಿನಲ್ಲಿ ಸಮೂಟಿಸಲಾಗಿರುವ ಮಸ್ಟರ್ ರೋಲ್ ಪ್ರಕಾರ ಸ್ಥಳ ಪರಿಶೀಲನೆ ನಡೆಸಿದ್ದು. 2011-12ನೇ ಸಾಲಿನಲ್ಲಿ ನಾಗಠಾಣ ಗ್ರಾಮದಲ್ಲಿ ರೋಡ್ ಮಟ್ಟದ ಹತ್ತಿರ ಇರುವ ಅಂಗಡವಾಡಿ ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ವತಿಯಿಂದ ರೂ.2,15,000/- ಅನ್ನು ಬಿಡುಗಡೆ ಮಾಡಲಾಗಿದ್ದು, ಪಂಚಾಯತಿಯುವರು ಸದರಿ ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. ಆದರೆ ಸದರಿ ಹಣವನ್ನು ಅಂಗನವಾಡಿಗೆ ಕಾಂಪೌಂಡ್ ಕಟ್ಟಿಸಲು ಉಪಯೋಗಿಸಿರುತ್ತಾರೆ. ತನಿಖಾಧಿಕಾರಿಯವರೊಡನೆ ಹಾಜರಿದ್ದ ಸಹಾಯಕ ಅಭಿಯಂತರರು ಸದರಿ ಕಾಂಪೌಂಡ್ ಕಟ್ಟಲು ರೂ.1 ರಿಂದ ರೂ.1.15 ಲಕ್ಷದ ವರೆಗೆ ಖರ್ಚಾಗಿರಬಹುದೆಂದು ಅಂದಾಜು ಮಾಡಿರುತ್ತಾರೆ. ಹಾಗೆಯೇ ಸನ್ 2011-12ನೇ ಸಾಲಿನಲ್ಲಿ, ನಾಗಠಾಣ

N. Anand

ಗ್ರಾಮದ ಹೆಚ್.ಕೆ. ಶಾಲೆಯ ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ವತಿಯಿಂದ ರೂ.4 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಆಟದ ಮೈದಾನವನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಆದರೆ ಸದರಿ ಶಾಲೆಯ ಮುಂಭಾಗದಲ್ಲಿ ಕಾಂಪೌಂಡ್ ಗೋಡೆ ಕಟ್ಟಲು ರೂ.1.33 ರಿಂದ 1.55 ಲಕ್ಷ ಬಾಕಿ ಇರುತ್ತದೆಂದು ಸದರಿ ಸಹಾಯಕ ಅಭಿಯಂತರರು ಅಂದಾಜು ಮಾಡಿರುತ್ತಾರೆ. 2010-11 ಸಾಲಿನಲ್ಲಿ ಹಿಂದೂ ಸ್ಮಶಾಣ ಸುಧಾರಣೆಗೆ ರೂ.4 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಸ್ಮಶಾಣದಲ್ಲಿ ಗಿಡಗಂಟೆಗಳನ್ನು, ಕಡಿಸಿ. ಸ್ಥಳವನ್ನು ನೆಲಮಟ್ಟವಾಗಿರುತ್ತದೆಂದು, ಇದಕ್ಕೆ ಸುಮಾರು ರೂ.2.50 ಲಕ್ಷದವರೆಗೂ ಖರ್ಚಾಗಿದೆ ಎಂದು ಅಂದಾಜು ಮಾಡಿರುತ್ತಾರೆ. 2011–12ನೇ ಸಾಲಿನಲ್ಲಿ ನಾಗತಾಣ ಗ್ರಾಮದ ಅಂಗವಾಡಿಯ ಮೈದಾನವನ್ನು ಅಭಿವೃದ್ಧಿ ಪಡಿಸಲು ರೂ.1,50,000/– ಅನ್ನು ಮಂಜೂರು ಮಾಡಲಾಗಿದ್ದು. ಸದರಿ ಮೈದಾನವನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. ಆದರೆ ಅಂಗನವಾಡಿಯ ಗೋದಾಮಿನ ಹತ್ತಿರವಿರುವ ಎಡಗಡೆ ಭಾಗದ ಗೋಡೆಯನ್ನು ಕಟ್ಟಿಸಿದ್ದು, ಅದಕ್ಕೆ ಸುಮಾರು ರೂ. 1.10 ಲಕ್ಷದವರೆಗೆ ಖರ್ಚಾಗಿರುತ್ತದೆಂದು ಸಹಾಯಕ ಅಭಿಯಂತರರು ಅಂದಾಜು ಮಾಡಿರುತ್ತಾರೆ. 2010–11ನೇ ಸಾಲಿನಲ್ಲಿ ಎಂ.ಪಿ.ಎಸ್ ಶಾಲೆಯ ಆಟದ ಮೈದಾನ ಸುಧಾರಣೆಗೆ ರೂ.50 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಕೇವಲ ಸ್ವಲ್ಪ ಕೆಂಪು ಮಣ್ಣನ್ನು ಮೈದಾನದಲ್ಲಿ ಹಾಕಿರುವುದಾಗಿ ಕಂಡುಬರುತ್ತದೆ. ಶಾಲೆಯ ಮೈದಾನವು ಈ ಹಿಂದೆಯೇ ಸಮಮಟ್ಟದಲ್ಲಿದ್ದು, ಮೈದಾನವನ್ನು ಸಮಮಟ್ಟ ಮಾಡಿರುವುದು ಕಂಡುಬರುವುದಿಲ್ಲ. ಕೆಂಪು ಮಣ್ಣು ಹಾಕಲು ರೂ.50.000/– ಖರ್ಚಾಗಿದೆಯೆಂದು ಸಹಾಯಕ ಅಭಿಯಂತರರು ಅಂದಾಜು ಮಾಡಿರುತ್ತಾರೆ. 2010–11ನೇ ಸಾಲಿನಲ್ಲಿ ಹುಣಸ್ಯಾಳ ಗ್ರಾಮದ ಅಂಗನವಾಡಿ ಮೈದಾನವನ್ನು ಅಭಿವೃದ್ಧಿಗೆ ರೂ.3.50 ಲಕ್ಷ ವನ್ನು ಮಂಜೂರು ಮಾಡಲಾಗಿದ್ದು. ಸದರಿ ಆಟದ ಮೈದಾನವನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಆದರೆ, ಅಂಗನವಾಡಿಗೆ ಕಾಂಪೌಂಡ್ ಗೋಡೆಯನ್ನು ಕಟ್ಟಲಾಗಿರುತ್ತದೆ. 2012 ಮತ್ತು 2013ನೇ ಸಾಲಿನಲ್ಲಿ ಹುಣಸ್ಯಾಳ ಗ್ರಾಮದ ಹಳೆ ಪಂಚಾಯಿತಿ ಕಾಂಪೌಂಡ ಗೋಡೆ ನಿರ್ಮಾಣಕ್ಕೆ ರೂ.5 ಲಕ್ಷ ಬಿಡುಗಡೆ ಮಾಡಲಾಗಿದ್ದು. ಕಾಂಪೌಂಡ್ ಗೋಡೆಯನ್ನು ಕಟ್ಟಲಾಗಿರುತ್ತದೆ ಎಂದು. ಆದರೆ ಸದರಿ ಗೋಡೆ ಕಟ್ಟಲು ಅಂದಾಜು ರೂ.4,15,000/– ಖರ್ಚಾಗಿರುತ್ತದೆ ಎಂದು ಸದರಿ ಸಹಾಯಕ ಅಭಿಯಂತರರು ಅಂದಾಜು ಮಾಡಿರುತ್ತಾರೆ.

7. ಈ ಮೇಲೆ ಹೇಳಿದ ಎಲ್ಲಾ ಕಾಮಗಾರಿಗಳಿಗೆ ಒಟ್ಟು ಮಂಜೂರಾದ ಮೊತ್ತ ರೂ.24,65,000/– ಗಳಾಗಿದ್ದು. ಸಹಾಯಕ ಅಭಿಯಂತರರಾದ ಶ್ರೀ ಎಸ್.ಎಂ. ವಾಲಿ ಇವರ ಪರಿಶೀಲನೆಯಿಂದ ಸದರಿ ಕಾಮಗಾರಿಗಳಿಗೆ ಕೇವಲ ರೂ. 12,15,000/– ಗಳಷ್ಟು ಮಾತ್ರ ಖರ್ಚು ಮಾಡಿರುವುದಾಗಿ ಕಂಡುಬಂದಿರುತ್ತದೆ.

N. Anand

8. ಈ ಮೇಲಿನ ಅಂಶಗಳನ್ನು ಪರಿಶೀಲಿಸಿದ್ದಲ್ಲಿ

ಅ) ನಾಗಠಾಣ ಗ್ರಾಮ ಪಂಚಾಯತಿಯಿಂದ ಶೌಚಾಲಯಗಳ ನಿರ್ಮಾಣಕ್ಕಾಗಿ ಪ್ರೋತ್ಸಾಹ ಧನವನ್ನು ಪಡೆದಿದ್ದರೂ 11 ಶೌಚಾಲಯಗಳು ನಿರ್ಮಾಣವಾಗಿರುವುದಿಲ್ಲ.

ಆ) ಬಸವ ವಸತಿ ಯೋಜನೆಯಡಿಯಲ್ಲಿ ಒಟ್ಟು 76 ಫಲಾನುಭವಿಗಳಿಗೆ ಮನೆ ಕಟ್ಟಲು ತಲಾ ರೂ.50,000/- ದಂತೆ ಹಣವನ್ನು ಮಂಜೂರು ಮಾಡಿದ್ದು, ಇದರಲ್ಲಿ ಒಟ್ಟು 8 ಫಲಾನುಭವಿಗಳು ಹಣ ಪಡೆದಿದ್ದರೂ ಮನೆ ಕಟ್ಟಿರುವುದಿಲ್ಲ.

ಇ) ಫಲಾನುಭವಿಗಳ ಆಯ್ಕೆಯಲ್ಲಿ ಹಾಗೂ ಮನೆಗಳ ಮತ್ತು ಶೌಚಾಲಯಗಳ ನಿರ್ಮಾಣದ ಹಂತದಲ್ಲಿ ಎದುರುದಾರರುಗಳು ವಸತಿ ಮತ್ತು ನರೇಗಾ ಯೋಜನೆಯಡಿಯಲ್ಲಿನ ನಿಯಮಾವಳಿಗಳನ್ನು ಪಾಲಿಸಿರುವುದಿಲ್ಲ. (ಪ್ರತಿಯೊಂದು ಹಂತದ ಕಾಮಗಾರಿಗಳನ್ನು ಪರಿಶೀಲಿಸಿ ಫೋಟೋ ತೆಗೆದು ಕಡತಕ್ಕೆ ಅಳವಡಿಸಿ ಕೆಲಸ ಸಂಪೂರ್ಣವಾದ ನಂತರ ಹಣವನ್ನು ಮಂಜೂರು ಮಾಡದೇ ಇರುವುದು ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ). ಹಾಗೂ ಮೇಲೆ ಹೇಳಿದ ವಿವಿಧ ಕಾಮಗಾರಿಗಳಿಗೆ ವ್ಯಯ ಮಾಡಿರುವ ಮೊತ್ತವು ಮಂಜೂರಾದ ಮೊತ್ತಕ್ಕೆ ಕಾಮಗಾರಿಯಾಗಿರುವುದಿಲ್ಲ ಹಾಗೂ ಮಂಜೂರಾದ ಕಾಮಗಾರಿಗಳನ್ನು ಕೈಗೊಳ್ಳದೆ ಬೇರೆ ಕಾಮಗಾರಿಗಳನ್ನು ಕೈಗೊಂಡಿರುವುದು ಸ್ಪಷ್ಟಪಡುತ್ತದೆ.

9. ಎದುರುದಾರರು ಮೇಲೆ ಹೇಳಿದಂತೆ ನರೇಗಾ ಹಾಗೂ ವಸತಿ ಯೋಜನೆಗಳಡಿಯಲ್ಲಿನ ನಿಯಮಾವಳಿಗಳನ್ನು ಪಾಲಿಸದೇ ಇರುವ ಬಗ್ಗೆ ಒಂಬುಡ್ಸ್‌ಮನ್ ರವರ ಆದೇಶವೂ ಸಹ ಸ್ಪಷ್ಟೀಕರಿಸುತ್ತದೆ. ಈ ಕರ್ತವ್ಯಲೋಪ ಶ್ರೀ ಕೆ.ಐ.ಭಾವಖಾನ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ ಚಂದ್ರಶೇಖರ ಬಸಪ್ಪ ಅರಿಕೇರಿ, ನಾಗಠಾಣ ಗ್ರಾಮ ಪಂಚಾಯತಿ ಅಧ್ಯಕ್ಷರು ಇವರುಗಳ ಅವಧಿಯಲ್ಲಿ ಕಾಮಗಾರಿಯಾಗಿರುತ್ತದೆ ಎಂದು ಅದ್ದರಿಂದ, ಸದರಿಯವರುಗಳು ಹೊಣೆಗಾರರಾಗಿರುತ್ತಾರೆಂದು. ಇದಲ್ಲದೆ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಮಹಮ್ಮದ್ ಮುಸ್ತಾ ತಂದೆ ಅಲ್ಲಾವುದ್ದೀನ ಬಾಗವಾನ ಇವರು ಮಂಜೂರಾತಿಯನ್ನು ಶಿಫಾರಸ್ಸು ಮಾಡಿದ್ದರೆಂದು ಹಾಗೂ ಜೆ.ಇ. ಪೋಲ ಇವರು ಅಂದಾಜು ಪಟ್ಟಿ ತಯಾರಿಸಿ ಮುಕ್ತಾಯ ಪ್ರಮಾಣ ಪತ್ರ ನೀಡಿರುತ್ತಾರೆಂದು ತಿಳಿದುಬಂದಿರುತ್ತದೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಆದರೆ, ಇವರುಗಳ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ 1 ಮತ್ತು 2ನೇ ಎದುರುದಾರರಾದ 1) ಶ್ರೀ ಕೆ.ಐ. ಬಾವಾಖಾನ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಾಗಠಾಣ ಗ್ರಾಮ ಪಂಚಾಯತ್, ವಿಜಯಪುರ, ವಿಜಯಪುರ ಜಿಲ್ಲೆ (2) ಶ್ರೀ ಚಂದ್ರಶೇಖರ ಬಸಪ್ಪ ಅರಕೇರಿ, ಅಧ್ಯಕ್ಷರು,

ನಾಗಠಾಣ ಗ್ರಾಮ ಪಂಚಾಯತ್, ವಿಜಯಪುರ, ವಿಜಯಪುರ ಜಿಲ್ಲೆ ಇವರುಗಳು ಮೇಲ್ಕಂಡ ಲೋಪದೋಷಗಳಿಗೆ/ಅವ್ಯವಹಾರಗಳಿಗೆ/ಕಳಪೆ ಕಾಮಗಾರಿಗಳಿಗೆ ಜವಾಬ್ದಾರರಾಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಆದ್ದರಿಂದ, ಎದುರುದಾರರುಗಳು ಸಲ್ಲಿಸಿರುವ ಉತ್ತರ/ಆಕ್ಷೇಪಣೆಯನ್ನು ಪರಿಶೀಲಿಸಲಾಗಿ, ಎದುರುದಾರರ ಮೇಲಿನ ಆಪಾದನೆಯನ್ನು ಕೈಬಿಡಲು ಯಾವುದೇ ಸಮಾಧಾನಕರ ಕಾರಣ ಕಂಡುಬರುವುದಿಲ್ಲ. ಆದ್ದರಿಂದ, ಸದರಿ ಎದುರುದಾರರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11. ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರುಗಳು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರಾದ 1) ಶ್ರೀ ಕೆ.ಐ. ಬಾಪಾಖಾನ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಾಗಠಾಣ ಗ್ರಾಮ ಪಂಚಾಯತ್, ವಿಜಯಪುರ, ವಿಜಯಪುರ ಜಿಲ್ಲೆ (2) ಶ್ರೀ ಚಂದ್ರಶೇಖರ ಬಸಪ್ಪ ತರಕೇರಿ, ಅಧ್ಯಕ್ಷರು, ನಾಗಠಾಣ ಗ್ರಾಮ ಪಂಚಾಯತ್, ವಿಜಯಪುರ, ವಿಜಯಪುರ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 2018

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.